ಬದಲಾಗುತಿದೆ, ಸರಸ್... ದೇಶ ನಾವು ಅಂದುಕೊಂಡಿರೋದಕ್ಕಿಂತ ಹೆಚ್ಚಿಗೆ ಹಿಂದೂ ಆಗಿಬಿಟ್ಟಿದೆ! ಎಲ್ಲರೂ ನಮ್ಮಲ್ಲಿನ ಪುರಾತನ – ಸನಾತನ ನಂಬಿಕೆಗಳಿಗೆ ಮೊದಲಿಗೂ ಹೆಚ್ಚು ಜೋತು ಬೀಳುತಾ ಇದ್ದಾರೆ... ಯಾವುದು ಸರಿ ಯಾವುದು ತಪ್ಪು ಗೊತ್ತಾಗುತಾ ಇಲ್ಲ...' ಎಂದೆಲ್ಲ, ಅನೂಪ ಅಭಿಮತಿಸಿ ಆಡಿದ. ಈ ಮಾತು ವೈಯಕ್ತಿಕವಾಗಿ ನನಗೆ ಹಿಡಿಸದಿದ್ದರೂ, ಇವೊತ್ತಿನ ದೇಶಕಾಲದ ನಿಟ್ಟಿನಲ್ಲೇಕೋ, ನನಗೆ ಬಲು ವಿಶೇಷವೆನ್ನಿಸಿತು. 'ಯಾವುದು ಧರ್ಮ, ಯಾವುದು ರಾಜಕೀಯ – ಅಂತ ಗೊತ್ತಾಗದ ಪರಿಸ್ಥಿತಿಯಲ್ಲಿ ನಾವಿದ್ದೀವಿ! ಅಟರ್ಲೀ ಕನ್ಫ್ಯೂಸಿಂಗ್ ರೈಟ್?!' ಈ ಮಾತನ್ನಂತೂ ತಲೆದೂಗಿಕೊಂಡು ಕೇಳಿಸಿಕೊಂಡೆ.

ಅನೂಪನ ಮಾತಿನ ಅರ್ಥಾನರ್ಥದ ಬಗ್ಗೆ ನಾನು ತಲೆಕೆಡಿಸಿಕೊಳ್ಳುವಾಗಲೇ – ಇತ್ತ ನನ್ನ ಅಮ್ಮ ಇನ್ನೊಂದೇ ಸಂಗತಿಯೊಳಕ್ಕೆ ಕೈಯಿಕ್ಕಿ ಕಲಕಿದಳೇನೋ! ಅಥವಾ, ಜೇನುಹುಟ್ಟನ್ನೇ ಕದಡಿದಳೋ ಹೇಗೆ?

ನನ್ನ ಅಮ್ಮ, 'ಯಾರಂತೆಯೇ ಸತ್ತಿರೋದು? ಏನು ಹೆಸರು?' ಎಂದು ತನ್ನ ಸೊಸೆಯನ್ನು ವಿಚಾರಿಸಿದ್ದಷ್ಟೇ – ನನ್ನ ಗೆಳತಿ ಶರ್ಲೀ ವರ್ಕಿ ಹೇಳಿದ – 'ನಿರ್ಗತಿಕ' ಸಾವೊಂದರ ಸಾಧಾರಣ ಸುದ್ದಿಯಾದರೂ, ನಮ್ಮೆದುರಿಗೊಂದು ವಿಸ್ಫೋಟಕ ಮಾಹಿತಿಯೆಂಬಂತೆ ಮಾರ್ಪಟ್ಟಿತು! ನಮ್ಮ ಮನಸ್ಸೊಳಗಿನ ವಿದ್ರಾವಕ ವಸ್ತುವೇ ತಾನೆಂಬಂತೆ ಕೆರಳಿ ಕಾಡಿತು!

'ಯಾರೋ ಸಾಕೇತರಾಮ – ಅಂತಲಂತೆ, ಅತ್ತೆ...' ಎಂದು ಕುಂದಗೌರಿ ಹೇಳಿದ್ದಷ್ಟೇ, ಅಮ್ಮ ತನ್ನೊಳಗೇ ನೂರೆಂಟು ಲೆಕ್ಕಾಚಾರ ತಾಳಿ, ತಕ್ಷಣ – ಚೆನ್ನೈಯಲ್ಲಿರುವ ತನ್ನ ಮೈದನನಿಗೆ ಅಂದರೆ ನನ್ನ ಇನ್ನೊಬ್ಬ ಚಿಕ್ಕಪ್ಪನಿಗೆ ಫೋನು ಹಚ್ಚಿದಳು.

ನೋಡನೋಡುತ್ತಲೇ ಕಣ್ಣೆದುರು ಹರಿಯುತ್ತಿದ್ದ ಇರುವೆ ಆನೆಯಾಗಿ ಮಾರ್ಪಟ್ಟಿತು! ಕಂಡಲ್ಲಿ ನಡೆದು, ನಡೆದಿದ್ದೇ ದಾರಿಯೆಂಬಂತೆ ಅಡ್ಡಾಡಿತು! ಕಡೆಯಲ್ಲಿಯಂತೂ, ನಮ್ಮ ಬುಡಕ್ಕೇ ಸೊಂಡಿಲಿಕ್ಕಿ ಅಲುಗಿಸಿತೇನೋ ಹೌದು, ನಾನಿರಲಿ – ನನ್ನ ಅಮ್ಮನಿಗೂ ಕಂಡು ಗೊತ್ತಿದ್ದಿರದ ಸಾಕೇತರಾಮ ಎಂಬಾತನ ಸಾವು, ಈಗ, ಇದ್ದಕ್ಕಿದ್ದಂತೆ, ನಮ್ಮ ಮನೆಯ ಸರ್ವಸಂಬಂಧಿತ ಸಂಗತಿಯಾಗಿ ಮಾರ್ಪಟ್ಟಿತು!

'ಎಲ್ಲಾ ಆಸ್ತೀನೂ ನಿನ್ನ ಫ್ರೆಂಡ್ ಹೆಸರಿಗೇ ಬರೆದಿದ್ದಾನಂತಲ್ಲೋ, ಇನ್ನೇನು ಬಿಡು?! ಈ ಬೆಂಗಳೂರಿನಲ್ಲಿ ಸುಖಾಸುಮ್ಮನೆ ಮೂನ್ನಾರು ಕೋಟಿಯ ಆಸ್ತಿ ಬರುತ್ತೆ ಅಂದರೆ ಸುಮ್ಮನೇನಾ? ಛಾನ್ಸು ತಾನೇ? ಇನ್ನು, ಈಕೆ ಮಾಡುತಿರೋದೇನೂ ಹೆಚ್ಚಲ್ಲ... ಅಸಲಿನಲ್ಲಿ, ನೀನು ಈ ಸಂಸ್ಕಾರ ಮಾಡಬೇಕಿತ್ತು, ಗೊತ್ತಾ?!' ಅಮ್ಮ ಒಮ್ಮಿಂದೊಮ್ಮೆಗೆ ಬಡಬಡಿಸಿ ಪರಿತಪಿಸಿದಳು!

ಈಗ ನಾನೂ, ಕುಂದಗೌರಿಯೂ – ಇದ್ದಕ್ಕಿದ್ದಂತೆ ವರಸೆ ಬದಲಿಸಿದ ಅಮ್ಮನತ್ತಲೇ ನೋಡುತ್ತ ಕಕ್ಕಾವಿಕ್ಕಿ ತಾಳಿನಿಂತೆವು!

## ನಾಗರಾಜ ವಸ್ತಾರೆ

ಕವಿ, ಕತೆಗಾರ, ಪ್ರಬಂಧಕಾರ, ಆರ್ಕಿಟೆಕ್ಟ್ ನಾಗರಾಜ ವಸ್ತಾರೆ 'ಹಕೂನ ಮಟಾಟ', 'ನಿರವಯವ', '90 ಡಿಗ್ರಿ', '180 ಡಿಗ್ರಿ' ಎಂಬ ಕಥಾಸಂಕಲನಗಳನ್ನೂ, 'ಮಡಿಲು', 'ಅರ್ಬನ್ ಪ್ಯಾಂಥರ್' ಎಂಬ ನೀಳ್ಗತೆಗಳನ್ನೂ, 'ಬಣ್ಣದ ದಂಗೆ' ಎಂಬ ಕಾದಂಬರಿಯನ್ನೂ ಪ್ರಕಟಿಸಿದ್ದಾರೆ. 'ಹಳೆಮನೆ ಕತೆ', 'ಕಮಾನು ಕಟ್ಟುಕತೆ ಕಟ್ಟುಪಾಡು' ಅವರ ಅಂಕಣ ಬರಹಗಳ ಸಂಕಲನವಾದರೆ, 'ಸಾಂಚಿಮುದ್ರೆ' ಮತ್ತು 'ಪಟ್ಟಣ ಪುರಾಣ' ಅವರ ಪ್ರಬಂಧಸಂಗ್ರಹಗಳು. 'ವಸ್ತಾರೆ ಪದ್ಯಗಳು' ಮತ್ತು 'ವಸ್ತಾರೆ ಇನ್ನೂ 75' ಕವನ ಸಂಕಲನಗಳು. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.